## ದರ್ಶನ್ ಗೈರು

**ಚಿತ್ರಮಂದಿರಗಳಿಗೆ** ಪ್ರೇಕ್ಷಕರನ್ನು ದೊಡ್ಡಮಟ್ಟದಲ್ಲಿ ಸೆಳೆಯುವ ಶಕ್ತಿಯಿರುವ ನಟ ದರ್ಶನ್ 2021ರಲ್ಲಿ ತೆರೆಕಂಡ 'ರಾಬರ್ಟ್' ನಂತರ ದರ್ಶನ್‌ರ ಯಾವ ಚಿತ್ರವೂ ತೆರೆಕಂಡಿಲ್ಲ. 2022 ದರ್ಶನ್ ವೃತ್ತಿಜೀವನದ ಬೆಳ್ಳಿಹಬ್ಬದ ವರ್ಷವೂ ಹೌದು. ಅವರು ನಟಿಸಿದ ಮೊದಲ ಸಿನಿಮಾ, ಎಸ್. ನಾರಾಯಣ್ ನಿರ್ದೇಶನದ 'ಮಹಾಭಾರತ' 1997ರ ಆಗಸ್ಟ್ 11ರಂದು ತೆರೆಕಂಡಿತ್ತು. ಈ ಬೆಳ್ಳಿಹಬ್ಬದ ವರ್ಷದಲ್ಲಿ, ತಮ್ಮ ನೆಚ್ಚಿನ ನಾಯಕನಟನ ಹೊಸ ಅಭಿಮಾನಿಗಳು ನಿರೀಕ್ಷಿಸಿದ್ದು ಫಲಕೊಡಲಿಲ್ಲ. ವರ್ಷದುದ್ದಕ್ಕೂ ದರ್ಶನ್ ಸುದ್ದಿಯಲ್ಲಿದ್ದುದು ಸಿನಿಮೇತರ ಕಾರಣಗಳಿಂದಾಗಿ!

2023ರ ಜನವರಿ 26ಕ್ಕೆ 'ಕ್ರಾಂತಿ' ಬಿಡುಗಡೆಯಾಗಲಿದೆ. ಈ ಸಿನಿಮಾದ ಮೂಲಕ 2022ರಲ್ಲಿ ಕನ್ನಡ ಚಿತ್ರೋದ್ಯಮ ಗಳಿಸಿದ ಗೆಲುವಿನ ಸರಪಳಿ ಮುಂದುವರೆಯುವ ಸಾಧ್ಯತೆಯಿದೆ.



ಬಿಡುಗಡೆಗೆ ಸಜ್ಜಾಗಿರುವ ಕ್ರಾಂತಿ ಸಿನಿಮಾದಲ್ಲಿ ನಟ ದರ್ಶನ್

ಮಹೇಶ್, ನಿಧಿ ಹೆಗಡೆ, ಬಾಬು ಹಿರಣ್ಣಯ್ಯ ಹಾಗೂ ಶರಣ್ಯಾ ಸುರೇಶ್ ತಾರಾಗಣದಲ್ಲಿರುವ ಪ್ರಮುಖರು.

ಆಗಸ್ಟ್ ತಿಂಗಳಲ್ಲಿ ತೆರೆಕಂಡ 'ಡೊಳ್ಳು' ಜನಪದ ಕಲೆಯೊಂದನ್ನು ಜನಮನಕ್ಕೆ ಮುಟ್ಟಿಸುವ ಅಪ್ಪಪ್ರಯತ್ನ. ಕರ್ನಾಟಕದ ಅಸ್ಮಿತೆಗಳಲ್ಲೊಂದಾದ ಡೊಳ್ಳು ಕುಣಿತವನ್ನು ನೆಚ್ಚಿದ, ಆ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗಬೇಕೆನ್ನುವ ಹಂಬಲ ಹೊಂದಿದ ಮನಸುಗಳ ಕಥೆಯನ್ನು ಸಾಗರ್ ಪುರಾಣಿಕ್ ಅಬ್ಬರವಿಲ್ಲದೆ ತೆರೆಗೆ ತಂದಿದ್ದಾರೆ. ಮಣ್ಣಿನ ಕಥೆಗಳನ್ನು ನೆಚ್ಚಿಕೊಂಡು ಉತ್ತಮ ಚಿತ್ರಗಳನ್ನು ರೂಪಿಸಬಹುದು ಎನ್ನುವುದಕ್ಕೆ 'ಡೊಳ್ಳು' ಮತ್ತು 'ಕಾಂತಾರ' ಯಶಸ್ವಿ ಉದಾಹರಣೆಗಳು.

'ಲಕ್ಕಿ ಮ್ಯಾನ್' ಹಾಗೂ 'ಮಾನ್ಸೂನ್ ರಾಗ' ಸೆಪ್ಟೆಂಬರ್‌ನಲ್ಲಿ ತೆರೆಕಂಡ ಗಮನಾರ್ಹ ಸಿನಿಮಾಗಳು. ಡಾರ್ಲಿಂಗ್ ಕೃಷ್ಣ ಹಾಗೂ ಸಂಗೀತಾ ಶೃಂಗೇರಿ ಜೋಡಿಯ 'ಲಕ್ಕಿ ಮ್ಯಾನ್', ಎಸ್. ನಾಗೇಂದ್ರಪ್ರಸಾದ್ ನಿರ್ದೇಶನದ ಸಿನಿಮಾ. ಪುನೀತ್ ರಾಜ್‌ಕುಮಾರ್ ವಿಶೇಷ ಪಾತ್ರವೊಂದರಲ್ಲಿ ನಟಿಸಿರುವುದು ಚಿತ್ರದ ವಿಶೇಷ. ನಾಲ್ಕು ಪ್ರೇಮಕಥೆಗಳ ಹೆಣಿಗೆ, ಎಸ್. ರವೀಂದ್ರನಾಥ್ ನಿರ್ದೇಶನದ 'ಮಾನ್ಸೂನ್ ರಾಗ' ಚಿತ್ರದ್ದು. ರಚಿತಾ ರಾಮ್, ಸುಹಾಸಿನಿ, ಯಶಾ ಶಿವಕುಮಾರ್ ಮತ್ತು ಧನಂಜಯ ಮುಖ್ಯ ಭೂಮಿಕೆಯಲ್ಲಿದ್ದ ಈ ಸಿನಿಮಾ, ಪಾತ್ರಗಳ ಒಳತೋಟಿಯ ಪರಿಣಾಮಕಾರಿ ಚಿತ್ರಣದಿಂದಾಗಿ ಗಮನಸೆಳೆದಿತ್ತು. ಈ ಸಿನಿಮಾ ತೆಲುಗಿನ 'C/O ಕಾಂಚೇರಪಾಲೆಂ' (2018) ಚಿತ್ರಕ್ಕೆ ಋಣಿಯಾಗಿರುವುದನ್ನು ಚಿತ್ರತಂಡ ಮುಚ್ಚಿಟ್ಟಿದೆ ಎಂದು ಕೆಲವು ಚಿತ್ರರಸಿಕರು ಆಪಾದಿಸಿದರು.

ವಿಜಯ್ ಪ್ರಸಾದ್ ನಿರ್ದೇಶನದ 'ತೋತಾಪುರಿ' ಸೆಪ್ಟೆಂಬರ್‌ನ ಮತ್ತೊಂದು ಕೊಯಿಲು. 'ನೀರ್ ದೋಸೆ' ನಂತರ ಜಗ್ಗೇಶ್ ಮತ್ತು ವಿಜಯ್ ಪ್ರಸಾದ್ ಒಟ್ಟಿಗೆ ಕೆಲಸ ಮಾಡಿದ್ದರಿಂದಾಗಿ 'ತೋತಾಪುರಿ' ನಿರೀಕ್ಷೆ ಮೂಡಿಸಿತ್ತು. ಧನಂಜಯ ಮುಖ್ಯಪಾತ್ರದಲ್ಲಿ ನಟಿಸಿದ್ದುದೂ ಸಿನಿಮಾದ ಕುರಿತು ನಿರೀಕ್ಷೆಗಳು ಹೆಚ್ಚಲು ಕಾರಣವಾಗಿತ್ತು. ಆದರೆ, 'ತೋತಾಪುರಿ'ಯನ್ನು ಪ್ರೇಕ್ಷಕರು ಒಪ್ಪಿಕೊಳ್ಳಲಿಲ್ಲ. ಪ್ರೇಮ–ಕಾಮದೊಂದಿಗೆ ತೆಳು ಅಧ್ಯಾತ್ಮವನ್ನು ಕಥೆಯನ್ನಾಗಿಸುವ ವಿಜಯ್ ಪ್ರಸಾದ್ ಶೈಲಿ 'ತೋತಾಪುರಿ' ಹಾಗೂ ಪೆಟ್ರೊಮ್ಯಾಕ್ಸ್' – ಎರಡು ಸಿನಿಮಾಗಳಲ್ಲೂ ಕ್ಲಿಕ್ಕಾಗಲಿಲ್ಲ.

ಸಂಖ್ಯಾ ದೃಷ್ಟಿಯಿಂದ 2022 ಧನಂಜಯ ವರ್ಷ. 'ಬೈರಾಗಿ', 'ಮಾನ್ಸೂನ್ ರಾಗ', 'ತೋತಾಪುರಿ' ಸಿನಿಮಾಗಳ ನಂತರ, ಧನಂಜಯ್ ನಟನೆಯ 'ಹೆಡ್ ಬುಷ್' ಗಾಂಧಿಜಯಂತಿಯ ತಿಂಗಳಿನಲ್ಲಿ ತೆರೆಕಂಡಿತು. ಶೂನ್ಯ ಅವರ ನಿರ್ದೇಶನದ 'ಹೆಡ್ ಬುಷ್', ಬೆಂಗಳೂರಿನ ಭೂಗತಲೋಕದಲ್ಲಿ ಡಾನ್ ಆಗಿ ಮೆರೆದ ಜಯರಾಜ್ ಜೀವನವೃತ್ತಾಂತವನ್ನು ಆಧರಿಸಿದ್ದು. 'ಆ ದಿನಗಳು' (2007) ಸಿನಿಮಾ ಮೂಲಕ ಕೊತ್ವಾಲ್ ಕಥೆಯನ್ನು ಬೆಳ್ಳಿತೆರೆಗೆ ಪರಿಚಯಿಸಿದ್ದ ಅಗ್ನಿ ಶ್ರೀಧರ್, 'ಹೆಡ್ ಬುಷ್' ಬಳಗಕ್ಕೂ ಜೀವದ್ರವ್ಯದಂತಿದ್ದರು. 'ಆ ದಿನಗಳು' ಯಶಸ್ಸು 'ಹೆಡ್ ಬುಷ್' ವಿಷಯದಲ್ಲಿ ಮರುಕಳಿಸಲಿಲ್ಲ; ನಿರ್ಮಾಪಕನಾಗಿ ಧನಂಜಯ ಹಿತಾನುಭವ ಉಂಟಾಗಲಿಲ್ಲ.

### ಪ್ರೀತಿ-ಕೃತಜ್ಞತೆಯ 'ಗಂಧದಗುಡಿ'

ಅಕ್ಟೋಬರ್ 28ರಂದು ತೆರೆಕಂಡ, ಅಮೋಘವರ್ಷ ನಿರ್ದೇಶನದ 'ಗಂಧದಗುಡಿ' ಡಾಕ್ಯುಡ್ರಾಮಾ ರಾಜ್ಯೋತ್ಸವ ಸಂಭ್ರಮಕ್ಕೆ ಅರ್ಥಪೂರ್ಣ ಮುನ್ನುಡಿ ಬರೆದ ಸಿನಿಮಾ. ಎಂ.ಪಿ. ಶಂಕರ್ ನಿರ್ಮಾಣದ, ವಿಜಯ್ ನಿರ್ದೇಶನದ, ರಾಜ್‌ಕುಮಾರ್ ಕಥಾನಾಯಕರಾಗಿದ್ದ 'ಗಂಧದಗುಡಿ' 1973ರಲ್ಲಿ ತೆರೆಕಂಡಿತ್ತು. ಆ ಸಿನಿಮಾದ ಎರಡನೇ ಭಾಗ 'ಗಂಧದಗುಡಿ – ಭಾಗ 2', ವಿಜಯ್ ನಿರ್ದೇಶನದಲ್ಲೇ ಶಿವರಾಜ್‌ಕುಮಾರ್ ನಾಯಕತ್ವದಲ್ಲಿ 1994ರಲ್ಲಿ ತೆರೆಕಂಡಿತ್ತು. ಅಪ್ಪ–ಅಣ್ಣನ ಹಾದಿಯಲ್ಲಿ ಅಪ್ಪು ಕೂಡ ನಡೆದ 'ಗಂಧದಗುಡಿ' ಡಾಕ್ಯುಡ್ರಾಮಾದ ರೂಪದಲ್ಲಿ ತೆರೆಕಂಡಿದ್ದು ವಿಶೇಷ. ಒಂದೇ ಶೀರ್ಷಿಕೆ ಹಾಗೂ ಕಥನದ ಮೂರು ಸಿನಿಮಾಗಳಲ್ಲಿ